# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5028/2024 ಫ್ರಾಸಾ-01
ಚಾಸಾ-01

ದಿನಾಂಕಃ 12-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಂಗಮ್ಮ |
| **ತಂದೆಯ / ಗಂಡನ ಹೆಸರು** | ಪೆದ್ದರಂಗಪ್ಪ |
| **ವಯಸ್ಸು** | 75 |
| **ಉದ್ಯೋಗ** | ಗೃಹಿಣಿ |
| **ವಾಸಸ್ಥಳ** | ಮೆಲವಾಯಿ ಗ್ರಾಮ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಮೃತ ರತ್ನಮ್ಮ ನನ್ನ ಮಗಳು, ಆರೋಪಿ ನನ್ನ ಆಳಿಯ. ಸುಮಾರು 20 ವರ್ಷದ ಹಿಂದೆ ನನ್ನ ಮಗಳ ಮದುವೆಯನ್ನು ಆರೋಪಿಯೊಂದಿಗೆ ಮಾಡಿಕೊಟ್ಟಿರುತ್ತೇನೆ. ಮದುವೆಯಾದ ನಂತರ ನನ್ನ ಮಗಳು ಮತ್ತು ಆಳಿಯ ದೇವರಬೆಟ್ಟ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು. ಆರೋಪಿತರ ಮನೆಯಲ್ಲಿ ಅವರ ತಂದೆ , ತಂಗಿ , ತಮ್ಮ ವಾಸ ಮಾಡುತ್ತಿದ್ದರು. ಮದುವೆಯಾದ ನಂತರ ಇಬ್ಬರು ಮಕ್ಕಳು ಜನಿಸಿರುತ್ತಾರೆ, ಅವರ ಹೆಸರು ರಾಹುಲ್ ಮತ್ತು ಪ್ರಜ್ವಲ್. ಆರೋಪಿ ಯಾವಾಗಲೂ ಕುಡಿಯಲು ದುಡ್ಡು ಕೊಡು ಎಂದು ನನ್ನ ಮಗಳಿಗೆ ಹೊಡೆಯುತ್ತಿದ್ದ. ನಾನು ಆಗಾಗ ನನ್ನ ಮಗಳ ಮನೆಗೆ ಹೋದಾಗ ಆರೋಪಿ ನನ್ನ ಮಗಳಿಗೆ ಹಿಂಸೆ ಕೊಡುವುದು ಗೊತ್ತಾಗಿರುತ್ತದೆ. ಆರೋಪಿತನು ನನ್ನ ಮಗಳನ್ನು ಹೊಡೆದು ಸಾಯಿಸಿ ನೇಣು ಹಾಕಿರುತ್ತಾನೆ. ಮಣ್ಣು ಮಾಡುವಾಗ ಅರಿಶಿನ ಶಾಸ್ತ್ರ ಮಾಡುವಾಗ ಮುಖಕ್ಕೆ ಅರಿಶಿನ ಹಚ್ಚುವಾಗ ಬಾಯಿಂದ ಮೂಗಿನಿಂದ ರಕ್ತ ಬರುತ್ತಿತ್ತು. ಆರೋಪಿತರ ಮನೆಯವರೇ ನನಗೆ ಮಗಳು ತೀರಿಕೊಂಡಿರುತ್ತಾಳೆಂದು ವಿಷಯ ತಿಳಿಸಿರುತ್ತಾರೆ. ನಾನು ಮಗಳ ಶವವನ್ನು ಮಣ್ಣು ಮಾಡಲು ತಂದಾಗ ನೋಡಿರುತ್ತೇನೆ.

ಈ ಬಗ್ಗೆ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ದೂರನ್ನು ನೋಡಿದೇನು ಅದರಲ್ಲಿ ನನ್ನ ಹೆಬ್ಬೆಟ್ಟಿನ ಗುರುತು ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನನ್ನ ಮಗಳ ಸಾವಿಗೆ ಆರೋಪಿಯೇ ಕಾರಣ. ನನ್ನ ಮಗಳ ಮಣ್ಣು ಮಾಡುವಾಗ ಆರೋಪಿ ಹಾಜರಿರಲಿಲ್ಲ ಎಲ್ಲಿದ್ದನು ಎಂದು ಗೊತ್ತಿಲ್ಲ.

**<u>ಪಾಟೀಸವಾಲು ಶ್ರೀ. ಪಿ.ಎನ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>**

ನನ್ನ ಆಳಿಯ ನನ್ನ ಮಗಳಿಗೆ ಕುಡಿಯಲು ದುಡ್ಡು ಕೊಡು ಎಂದು ಹೊಡೆಯುತ್ತಿದ್ದ ಮತ್ತು ಹಿಂಸೆ ಕೊಡುತ್ತಿದ್ದ ಎಂದು ನನ್ನ ಮಗಳು ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ನಾನು ಕೂಡ ನಮ್ಮ ಮಗಳು ಜೀವಂತ ಇರುವಾಗ ಆರೋಪಿಯ ವಿರುದ್ಧ ದೂರು ಕೊಟ್ಟಿರುವುದಿಲ್ಲ. ನನ್ನ ಮಗಳು ಆರೋಪಿ ಹೊಡೆಯುತ್ತಾನೆಂದು ಆಳುತ್ತಾ ಯವತ್ತೂ ನಮ್ಮ ಮನೆಗೆ ಬಂದಿರುವುದಿಲ್ಲ. ಈ ವಿಚಾರವಾಗಿ ಯಾವತ್ತೂ ಪಂಚಾಯಿತಿ ಮಾಡಿರುವುದಿಲ್ಲ. ಆರೋಪಿಯ ಬಳಿ ಮೇಕೆಗಳು ಇದ್ದವು ಎಂದರೆ ನಿಜ. ಆರೋಪಿ ಬೆಳಿಗ್ಗೆ ಮೇಕೆ ಮೆಯಿಸಲು ಹೋಗಿ ರಾತ್ರಿ 6-00 ಗಂಟೆಗೆ ಮನೆಗೆ ಬರುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮಗಳು ಕೂಲಿಗೆ ಹೋಗಿ 2-00 ಗಂಟೆಗೆ ಬರುತ್ತಿದ್ದಳು , ಆರೋಪಿ 4-00 ಗಂಟೆಗೆ ಮನೆಗೆ ಬಂದು ನನ್ನ ಮಗಳ ಬಳಿ ದುಡ್ಡು ಕೊಡು ಎಂದು ಕುಡಿದು ಜಗಳ ಮಾಡುತ್ತಿದ್ದ. ನನ್ನ ಮಗಳು ಕೂಲಿಗೆ ಹೋಗಿ 2-00 ಗಂಟೆಗೆ ಬರುತ್ತಿದ್ದಳು , ಆರೋಪಿ 4-00 ಗಂಟೆಗೆ ಮನೆಗೆ ಬಂದು ನನ್ನ ಮಗಳ ಬಳಿ ದುಡ್ಡು ಕೊಡು ಎಂದು ಕುಡಿದು ಜಗಳ ಮಾಡುತ್ತಿದ್ದ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಹೆಬ್ಬೆಟ್ಟಿನ ಗುರುತನ್ನು ಪಾವಗಡದಲ್ಲಿ ಹಾಕಿರುತ್ತೇನೆ, ಯಾವ ಜಾಗದಲ್ಲಿ ಹಾಕಿರುತ್ತೇನೆಂದು ನನಗೆ ಗೊತ್ತಿಲ್ಲ. ನಿಪಿ-1 ನ್ನು ಯಾರು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಬರೆದ ವಿಷಯವನ್ನು ನನಗೆ ಓದಿ ಹೇಳಿರುವುದಿಲ್ಲ.

ಚಾಸಾ-01

ಚಾಸಾ-2 ನನ್ನ ಮೊಮ್ಮಗ, ಚಾಸಾ-3, 4 ನಮ್ಮ ಜಾತಿಯವರು , ಆದರೆ ನಮ್ಮ ಸಂಬಂಧಿಕರು ಅಲ್ಲ. ಮದುವೆ ಸಮಯದಲ್ಲಿ ನನ್ನ ಮಗಳಿಗೆ ಕೊಟ್ಟ ಒಡವೆಗಳನ್ನು ನನ್ನ ಮಗ, ನನ್ನ ಮಗಳು ಮತ್ತು ಆರೋಪಿ ಸೇರಿ ಪಾವಗಡದ ಮುತ್ತೂಟ್ ಫೈನಾನ್ಸ್ ನಲ್ಲಿ ಅಡ ಇಟ್ಟಿರುತ್ತಾರೆ ಎಂದರೆ ನಿಜ. ಸದರಿ ಒಡವೆಗಳನ್ನು ವಾಪಸ್ಸು ಬಿಡಿಸಿಕೊಂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನಂತರದಲ್ಲಿ ನನ್ನ ಮಗಳು ಮೃತ ರತ್ನಳಿಗೆ ಬಂಗಾರದ ಗುಂಡುಗಳನ್ನು ತಂದು ಕೊಟ್ಟಿದ್ದ ಎಂದರೆ ನಿಜ. ಆ ಸಮಯದಲ್ಲಿ ನನ್ನ ಮಗಳು , ಮೊಮ್ಮಕ್ಕಳು ಮತ್ತು ಆರೋಪಿ ಚೆನ್ನಾಗಿದ್ದರು ಎಂದರೆ ನಿಜ. ನನ್ನ ಮಗ ಆರೋಪಿ ಮತ್ತು ನನ್ನ ಮಗಳ ಹತ್ತಿರ ಹೋಗಿ ದುಡ್ಡು ಪಡೆದುಕೊಂಡು ಬರುತ್ತಿದ್ದ ಎಂದರೆ ಸರಿಯಲ್ಲ.

ನನ್ನ ಮಗಳು ತೀರಿಕೊಳ್ಳುವ 2 ದಿನ ಮುಂಚೆ ನನ್ನ ಮಗ ಆರೋಪಿತರ ಮನೆಗೆ ಹೋಗಿದ್ದ ಎಂದರೆ ಸರಿಯಲ್ಲ. ಮುತ್ತೂಟ್ ಫೈನಾನ್ಸ್‌ರವರು ಒಡವೆಗಳನ್ನು ಬಿಡಿಸಿಕೊಳ್ಳಿ ಎಂದು ನೋಟೀಸು ಕೊಟ್ಟಿದ್ದರು ಎಂದರೆ ಸರಿಯಲ್ಲ. ಮುತ್ತೂಟ್ ಫೈನಾನ್ಸ್ ರವರು ಹಣ ಪಾವತಿ ಮಾಡಲು ನೋಟೀಸು ಕೊಟ್ಟಿದ್ದರಿಂದ ಹಣ ಕಟ್ಟದಿದ್ದರೆ ಮರ್ಯಾದೆ ಹೋಗುತ್ತದೆ ಎಂದು ನೇಣು ಹಾಕಿಕೊಂಡು ತೀರಿಕೊಂಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ಮಗಳು ನೇಣು ಹಾಕಿಕೊಂಡ ದಿನ ಆರೋಪಿ ಮೇಕೆ ಮೆಯಿಸಲು ಹೋಗಿದ್ದ ಎಂದರೆ ನಿಜ. ಮೇಕೆ ಮೆಯಿಸಲು ಹೋಗಿ ಬಂದು ನನ್ನ ಮಗಳಿಗೆ ಈ ರೀತಿ ಮಾಡಿರುತ್ತಾನೆ. ಆರೋಪಿ ಮಗಳಿಗೆ ಹೊಡೆದು ಸಾಯಿ ನೇಣು ಹಾಕಿದ್ದಾನೆಂದು ಯಾರು ಹೇಳಿರುವುದಿಲ್ಲ ಶವ ನೋಡಿದಾಗ ಗೊತ್ತಾಗಿರುತ್ತದೆ ಮತ್ತು ನೇಣು ಹಾಕಿರುವ ಹಗ್ಗ ನೋಡಿ ಗೊತ್ತಾಗಿರುತ್ತದೆ ಮತ್ತು ನೆಲದಲ್ಲಿ ರಕ್ತ ಚಲ್ಲಿರುವುದು ನೋಡಿ ಗೊತ್ತಾಗಿರುತ್ತದೆ. ಮನೆಯಲ್ಲಾ ರಕ್ತ ಚೆಲ್ಲಿತ್ತು. ಆರೋಪಿ ನನ್ನ ಮಗಳಿಗೆ ಹೊಡೆದು ಸಾಯಿಸಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳ ತೀರಿಕೊಂಡ ದಿನವೇ ನಾನು ಪಾವಗಡದಲ್ಲಿ ಹೋಗಿ ದೂರು ಕೊಟ್ಟು ಹೆಬ್ಬೆಟ್ಟು ಹಾಕಿರುತ್ತೇನೆ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**